

ಇತ್ತ ಪ್ರತಿದಿನ ಒಂದೊಂದು ಮನೆಯಲ್ಲಿ ಕೋಳಿಗಳು ಕಾಣೆಯಾಗುತ್ತಿರುವುದನ್ನು ಕಂಡು ಜನರು ಯಾರೋ ಕೋಳಿ ಕಳ್ಳ ಬಂದಿದ್ದಾನೆ ಎಂದು ಬಯ್ದುಕೊಳ್ಳುತ್ತ ತಮ್ಮತಮ್ಮ ಕೋಳಿಗಳನ್ನು ಭದ್ರ ಮಾಡಿಕೊಳ್ಳತೊಡಗಿದರು.

ಇತ್ತ ನರಿಗೂ ಸಹ ಕೋಳಿಗಳನ್ನು ತಿಂದು ಬೇಸರವಾಗಿ ಬೇರೆ ಯಾವುದಾದರೂ ಹೊಸ ರುಚಿಯಾದ ಆಹಾರಕ್ಕಾಗಿ ಹುಡುಕುತ್ತಿದ್ದಾಗಲೇ ಎರಡು ದಿನಗಳ ಹಿಂದೆ ಹುಟ್ಟಿದ್ದ ಕುರಿಮರಿಯೊಂದು ಅದರ ಕಣ್ಣಿಗೆ ಕಂಡಿತು. ರಾತ್ರಿಯಾಗುವುದನ್ನೇ ಕಾಯುತ್ತ ಕುಳಿತು, ರಾತ್ರಿ ಎಲ್ಲರೂ ಮಲಗಿದ ನಂತರ ನಿಧಾನವಾಗಿ ಕುರಿಯಿದ್ದ ದೊಡ್ಡಿಗೆ ನುಗ್ಗಿತು. ಆದರೆ, ಆ ದೊಡ್ಡಿಯಲ್ಲಿ ಸುಮಾರು ಎಂಟು ಹತ್ತು ದೊಡ್ಡ ಕುರಿಗಳಿದ್ದವು. ನರಿಗೆ ಅವುಗಳ ಬಗ್ಗೆ ತಿಳಿಯದೆ ದೊಡ್ಡಿಯೊಳಗೆ ನುಸುಳಿದ ತಕ್ಷಣ ಆಗಂತುಕನನ್ನು ನೋಡಿ ಕುರಿಗಳು "ಬ್ಯಾ... ಬ್ಯಾ..." ಎಂದು ಜೋರಾಗಿ ಶಬ್ದ ಮಾಡುತ್ತ ಓಡಾಡಲಾರಂಭಿಸಿದವು. ನರಿಗೆ ಗಾಬರಿಯಾಗಿ ಅತ್ತಿಂದಿತ್ತ ಇತ್ತಿಂದತ್ತ ಓಡುತ್ತಿರುವಾಗ ಒಂದು ಕುರಿಯ ಕಾಲಿನ ಕೆಳಗೆ ಸಿಕ್ಕಿ ಬಿದ್ದಿತು. ಇತ್ತ ಕುರಿಗಳ ಅರಚಾಟವನ್ನು ಕೇಳಿದ ಮನೆಯವರು ಬೆಳಕು ಹಿಡಿದು ದೊಡ್ಡಿಗೆ ಬಂದು ನೋಡಿದಾಗ ಕುರಿಗಳ ಮಧ್ಯೆ ನರಿ ಬಿದ್ದಿರುವುದನ್ನು ಕಂಡು ಅದನ್ನು ಹಿಡಿದು ಹೊಡೆದು ಹಾಕಿ, ಕಾಡಿನತ್ತ ಬಿಸಾಡಿ ಬಂದರು.

ನರಿ ಹೇಗೋ ತನ್ನ ಜೀವ ಉಳಿಸಿಕೊಂಡು ಜನರೆಲ್ಲ ಊರೊಳಗೆ ಹೋದ ನಂತರ ನಿಧಾನವಾಗಿ ಕುಂಟುತ್ತ ನನ್ನ ದುರಾಸೆಗೆ ತಕ್ಕ ಫಲ ಸಿಕ್ಕಿತು, ಇನ್ನು ಮುಂದೆ ಅತಿಯಾಗಿ ಆಸೆ ಪಡಬಾರದು ಎಂದುಕೊಳ್ಳುತ್ತ ಕಾಡಿನ ದಾರಿ ಹಿಡಿಯಿತು.